ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮೇ ತಾ। 24, ಸ್ಯ 1884.

ಗಮನ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ನಂ. 2. ತಾರೀಖು 1ನೇ ಮೇ 1884.

ಸಮಸ್ತಜನಗಳ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಪಡಿಸುವದೇನಂದರೆ, ಇನ್ನು ಮೇಲೆ ಬ್ರಿಟಿಷ್ ಇಂಡ್ಯದೇಶದಿಂದ ಮೈಸೂರು ದೇಶಕ್ಕೆ ಆಯುಧ ವ ಯುದ್ಧ ಸಾಮಗ್ರಿಗಳನ್ನು ರಫ್ತು ಮಾಡುವದಕ್ಕೋಸ್ಕರ ಲೈಸೆನ್ಸು ಬಗ್ಗೆ ಮೈಸೂರು ದೇಶದ ರೆಸಿಡೆಂಟರವರಿಗೆ ಬರೆಯಲ್ಪಡುವ ದರಖಾಸ್ತುಗಳು, ಇದುವರಿಗೆ ಜಾರೀಲಿಯಿದ್ದಂತೆ ಮೈಸೂರು ಛಾಪಾ ಕಾಗದದ ಮೇಲೆ ಬರಿಯುವದಕ್ಕೆ ಬದಲಾಗಿ, ಬ್ರಿಟಿಷ್ ಇಂಡ್ಯದೇಶದ ಐದು ರೂಪಾಯಿಗಳ ಬೆಲೆಯುಳ್ಳ ಛಾಪಾ ಕಾಗದ್ದಮೇಲೆ ಬರೆಯಲ್ಪಡತಕ್ಕದ್ದು.

2. ಪ್ರತಿ ದರಖಾಸ್ತಿನ ಸಂಗಡಲೂ, ಆಯುಧ ಯಾ ಯುದ್ಧ ಸಾಮಗ್ರಿಗಳು ಮೈಸೂರು ದೇಶದ ಯಾವ ಡಿಸ್ಟ್ರಿಕ್ಟಿಗೆ ಆಮದ್ ಮಾಡಲ್ಪಡತಕ್ಕದ್ದೋ ಆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಂದ, ದರಖಾಸ್ತುದಾರನ ಖಾಯಿಷ್ ಪ್ರಕಾರ ಲೈಸೆನ್ಸು ಕೊಡುವ ಬಗ್ಗೆ ಹರಕತ್ತಿಲ್ಲ ವೆಂಬುದಾಗಿ ನಮೂದ್ ಮಾಡಲ್ಪಟ್ಟ ಬಂದು ಲಿಟರ್ ಯಾ ಸರ್ಟಿಫಿಕೇಟ್ ಆಗಲಿ ಕಳುಹಿಸಲ್ಪಡತಕ್ಕದ್ದು.

ನಂ. 3. ತಾರೀಖು 7ನೇ ಮೇ 1884.

ಸ್ಯ 1883ನೇ ಮಾರ್ಚಿ 21ನೇ ಮತ್ತು 13ನೇ ನಂಬರ್ ಇಸ್ತಿಹಾರ್‌ನಾಮೆ ಅನುವರ್ತಿಸಿ, ಮೈಸೂರು ಶೇಮೆಯ ರೆಸೀಡೆಂಟರವರು, (1881ನೇ ಇಸವಿಯ XXII)ನೇ ಎಕ್ಸ್‌ಪ್ಲೊಜಿವ್ ಆಕ್ಟಿನ 13ನೇ ಸೆಕ್ಷನ ನಿಬಂಧನೆಗಳನುಸರಿಸಿ, ಬೆಂಗಳೂರು ಸಿವಿಲ್ ಮತ್ತು ಮಿಲಿಟೇರಿ ಸ್ಟೇಷನ್ನಲ್ಲಿ, ಕಂತ್ರಿ ಸ್ಪಿರಿಟ್ ಸಾರಾಯಿ, ಕಂತ್ರೀ ಉಕ್ಕಿದ ಸಾರಾಯಿ, ನಿಷಾಸ್ತುಗಳು, ವೆ ಇನ್ನುಗಳನ್ನು ಒಟ್ಟು ಪುರೋಕ್ಷಿತ್ತು ಮಾಡುವ ಬಗ್ಗೆ ಲೈಸೆನ್ಸುಗಳನ್ನು ಕೊಡಲಿಕ್ಕೆ ಸದರೀ ಸ್ಟೇಷನಿನ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗೂ, ಎಕ್ಸೈಜ್ ಯಾನೇ ಸುಂಕದ ಕಲೆಕ್ಟರಿಗೂ ಅಧಿಕಾರ ಕೊಡುತ್ತಾರೆ.

ಹುಕ್ಕುಂ ಬಫೋಜೇಬ,
ಸಿಜ್. ವೈಲಿ, ಮೇಜರ್,
ರೆಸಿಡೆಂಟರ ಅಸಿಸ್ಟೆಂಟ್.